# ಕರ್ನಾಟಕ ಸರ್ಕಾರ

## ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ

# ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ (ಕೆ.ಎಸ್.ಡಿ.ಎ)

## ನವೆಂಬರ್ 2020 ತಿಂಗಳ ಸಂಕ್ಷಿಪ್ತ ವರದಿ

# ಕರ್ನಾಟಕ ಸರ್ಕಾರ

## ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ

# ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ (ಕೆ.ಎಸ್.ಡಿ.ಎ)

# ನವೆಂಬರ್ 2020 ತಿಂಗಳ ಸಂಕ್ಷಿಪ್ತ ವರದಿ

**ಮುನ್ನುಡಿ**

ಕೌಶಲ್ಯ ತರಬೇತಿಯಲ್ಲಿ ಗುಣಮಟ್ಟದ ಮಾನದಂಡಗಳನ್ನು ಸ್ಥಾಪಿಸಲು, ಕೌಶಲ್ಯ ತರಬೇತಿಗಾಗಿ ಪಠ್ಯಕ್ರಮ, ಕೋರ್ಸ್ ವಿಷಯ ಮತ್ತು ಕ್ರೆಡಿಟ್ ಚೌಕಟ್ಟುಗಳ ಮಾನದಂಡಗಳನ್ನು ತಯಾರಿಸಲು, ತರಬೇತುದಾರರ ತರಬೇತಿಗೆ ಮಾರ್ಗಸೂಚಿಗಳನ್ನು ತಯಾರಿಸಲು, ರಾಜ್ಯದಲ್ಲಿ ಕೌಶಲ್ಯ ತರಬೇತಿ ಮತ್ತು ಕೌಶಲ್ಯ ಕಾರ್ಯಕ್ರಮಗಳ ಗುಣಮಟ್ಟವನ್ನು ಸಾಧಿಸಲು ಮಾನದಂಡಗಳನ್ನು ತಯಾರಿಸಲು, ಜಾಗತಿಕ ಮಾನದಂಡಗಳು ಮತ್ತು ಉತ್ತಮ ಅಭ್ಯಾಸಗಳನ್ನಾಧರಿಸಿ ಕಾರ್ಮಿಕ ಮಾರುಕಟ್ಟೆ ಮಾಹಿತಿ ವ್ಯವಸ್ಥೆಗಳು ಮತ್ತು ದತ್ತಾಂಶ ವ್ಯವಸ್ಥೆಗಳನ್ನು ವಿನ್ಯಾಸಗೊಳಿಸಿ ಅಭಿವೃದ್ಧಿ ಪಡಿಸಲು, ಕೌಶಲ್ಯ ಅಭಿವೃದ್ಧಿಗೆ ಸಂಬಂಧಿಸಿದ ಸಂಶೋಧನೆಗಳ ಒಳಹರಿವಿಗಾಗಿ ವಿಚಾರವೇದಿಕೆಯಾಗಿ ಕಾರ್ಯನಿರ್ವಹಿಸಲು ಹಾಗೂ ಪ್ರಾಧಿಕಾರದ ಉದ್ದೇಶಗಳನ್ನು ಪೂರೈಸಲು ಅಗತ್ಯವಾದ ಇನ್ನಿತರ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು, ರಾಜ್ಯ ಸರ್ಕಾರವು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ರಾಜ್ಯದ ಯುವಕರಿಗೆ ಕೌಶಲ್ಯ ತರಬೇತಿ ನೀಡುವುದಲ್ಲದೆ ಒಟ್ಟಾರೆಯಾಗಿ ಅವರಿಗೆ ಉದ್ಯೋಗವಕಾಶಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ಕೌಶಲ್ಯ ಅಭಿವೃದ್ಧಿ ಉಪಕ್ರಮಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಹಾಲಿ ಕೋವಿಡ್–19 ಪಿಡಿಗಿನ ಮಧ್ಯೆಯು ನವೆಂಬರ್ 2020 ಮಾಹೆಯಲ್ಲಿ ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರವು ಇತರೆ ದಿನನಿತ್ಯ ಚಟುವಟಿಕೆಗಳನ್ನು ಒಳಗೊಂಡಂತೆ, ಈ ಕೆಳಕಂಡ ಚಟುವಟಿಕೆಗಳನ್ನು ಹಮ್ಮಿಕೊಂಡಿತು.

ಪ್ರಾಧಿಕಾರವು ತನ್ನ ಹೊಸ ಕಛೇರಿಯ ಒಳಾಂಗಣ ವಿನ್ಯಾಸ ಕಾಮಗಾರಿಯನ್ನು ಸಂಪೂರ್ಣಗೊಳಿಸಿದೆ ಎಂದು ತಿಳಿಸಲು ಹೆಮ್ಮೆ ವಿಷಯವಾಗಿದೆ. ಹೊಸ ಕಛೇರಿಯು ಬನ್ನೇರುಘಟ್ಟ ರಸ್ತೆಯ ಡೈರಿ ವೃತ್ತದಲ್ಲಿ ನಿರ್ಮಾಣವಾದ ಕಲ್ಯಾಣ ಸುರಕ್ಷಾ ಭವನದ ನಾಲ್ಕನೇ ಮಹಡಿಯ ಪೂರ್ವ ಭಾಗದಲ್ಲಿ ಇರುತ್ತದೆ. ಈ ಕಛೇರಿಯ ಅಧಿಕೃತ ಉದ್ಘಾಟನೆ ಮಾಡಲು ಮಾನ್ಯ ಉಪ ಮುಖ್ಯಮಂತ್ರಿಗಳು ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಅವರಿಗೆ ಅನುಕೂಲಕರವಾದ ಸಮಯ ಹಾಗೂ ದಿನಾಂಕವನ್ನು ನಿಗಧಿಪಡಿಸುವಂತೆ ಕೋರಲಾಗಿದೆ.

ನವೆಂಬರ್ 2020 ಮಾಹೆಯಲ್ಲಿ ಪ್ರಾಧಿಕಾರವು ಈ ಕೆಳಕಂಡ ಚಟುವಟಿಕೆಗಳನ್ನು ಹಮ್ಮಿಕೊಂಡಿರುತ್ತದೆ. ಕೋವಿಡ್–19 ಪರಿಸ್ಥಿತಿ ದೇಶದಾದ್ಯಂತ ಇರುವ ಹಿನ್ನಲೆಯಲ್ಲಿ ಪ್ರಾಧಿಕಾರವು ತನ್ನ ಬಹುತೇಕ ಚಟುವಟಿಕೆಗಳನ್ನು ಆನ್‌ಲೈನ್ ಮೂಲಕ ಹಮ್ಮಿಕೊಂಡಿರುತ್ತದೆ. ಇತರೆ ದಿನನಿತ್ಯ ಚಟುವಟಿಕೆಗಳ ಮಧ್ಯೆ ಈ ಕೆಳಕಂಡ ಪ್ರಮುಖ ಚಟುವಟಿಕೆಗಳನ್ನು ಹಮ್ಮಿಕೊಂಡಿರುತ್ತದೆ.

## 2. ಸರ್ಕಾರಿ ಇಲಾಖೆಗಳು, ಉದ್ಯಮಗಳು ಹಾಗೂ ಇತರೆ ಸಂಸ್ಥೆಗಳೊಂದಿಗೆ ನಡೆಸಲಾದ ಸಭೆಗಳು ಹಾಗೂ ಚರ್ಚೆಗಳನ್ನು ಕುರಿತು.

### 2.1 ಟ್ಯಾಲಿ ಎಜುಕೇಷನ್ ಪ್ರೈವೇಟ್ ಲಿಮಿಟೆಡ್ ಇವರೊಂದಿಗೆ ಸಭೆ (ಟಿಇಪಿಎಲ್)

ಮಾನ್ಯ ಪ್ರಾಧಿಕಾರದ ಅಧ್ಯಕ್ಷರ ಸೂಚನೆ ಮೇರೆಗೆ ಪ್ರಾಧಿಕಾರದ ಸಮಾಲೋಚಕರು ದಿನಾಂಕ: 05–11–2020ರಂದು ಟ್ಯಾಲಿ ಎಜುಕೇಷನ್ ಪ್ರೈವೇಟ್ ಲಿಮಿಟೆಡ್‌ನ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಶ್ರೀ ಚಿಂತಾಮಣಿಗೌಡ ಪಾಟೀಲ್ ಪ್ರಾದೇಶಿಕ ವ್ಯವಸ್ಥಾಪಕರು ಟಿಇಪಿಎಲ್ ಅವರು ತಮ್ಮ ಪರಿಷ್ಕೃತ ಪ್ರಸ್ತಾವನೆಯನ್ನು ಕುರಿತು ವಿವರಿಸಿದರು. ಚರ್ಚೆಯ ನಂತರ ಪಠ್ಯಕ್ರಮ ಕುರಿತು ಸಮಾಲೋಚಕರು ಒಂದು ನಮೂನೆಯನ್ನು ತಯಾರಿಸಿ ಟಿಇಪಿಎಲ್ ಅವರೊಂದಿಗೆ ಹಂಚಿಕೊಳ್ಳುವುದಾಗಿ ತಿಳಿಸಿದರು. ಈ ಪಠ್ಯಕ್ರಮದ ನಮೂನೆಯನ್ನು ಟಿಇಪಿಎಲ್ ಸಂಸ್ಥೆಯು ಭರ್ತಿ ಮಾಡಿ ಅವರು ನಡೆಸುವ ಕೋರ್ಸ್‌ಗಳ ವಿವರಗಳೊಂದಿಗೆ ಪ್ರಾಧಿಕಾರಕ್ಕೆ ಕಳುಹಿಸಬೇಕಾಗಿ ತೀರ್ಮಾನಿಸಲಾಗಿದೆ.

**2.2 ಮ್ಯಾಟ್ ವರ್ಕ್ ಉದ್ಯೋಗವಕಾಶಗಳನ್ನು ಹೆಚ್ಚಿಸುವ ಕಾರ್ಯಕ್ರಮ ಕುರಿತು ಮ್ಯಾಟ್ ವರ್ಕ್ ಸಂಸ್ಥೆಯೊಂದಿಗೆ ಸಭೆ.**

ಅಧ್ಯಕ್ಷರು, ಕರ್ನಾಟಕ ಕೌಶಲ್ಯಾಭಿವೃದ್ಧಿ ಪ್ರಾಧಿಕಾರ ಅವರ ಸೂಚನೆ ಮೇರೆಗೆ, ಉದ್ಯೋಗವಕಾಶಗಳನ್ನು ಹೆಚ್ಚಿಸುವ ಯೋಜನೆ ಕುರಿತು ಶ್ರೀ ಎಸ್.ಜೆ. ಅಮಲನ್ ಸಮಾಲೋಚಕರು, ಕೆ.ಎಸ್.ಡಿ.ಎ. ಅವರು 05–11–2020ರಂದು ಒಂದು ಪ್ರಾಥಮಿಕ ಸಭೆ ನಡೆಸಿದರು. ಈ ಸಭೆಯಲ್ಲಿ ಶ್ರೀ ಚಂದನ್ ಪ್ರಮಾಣಿಕ್ ಸೇಲ್ಸ್ ನಿರ್ದೇಶಕರು (ಶಿಕ್ಷಣ), ಶ್ರೀ ವಿನಯ ಸುಬ್ರಮಣ್ಯ (ಪ್ರಾದೇಶಿಕ ಹಣಕಾಸು ವ್ಯವಸ್ಥಾಪಕರು) ಹಾಜರಿದ್ದರು.

ಶ್ರೀ ಚಂದನ್ ಪ್ರಮಾಣಿಕ್ ಸೇಲ್ಸ್ ನಿರ್ದೇಶಕರು (ಶಿಕ್ಷಣ) ಅವರು ಮ್ಯಾಟ್ ವರ್ಕ್ ಸಂಸ್ಥೆಯ ಕೌಶಲ್ಯಾಭಿವೃದ್ಧಿ ಕುರಿತು ಕೈಗೊಳ್ಳಲಾಗುತ್ತಿರುವ ಚಟುವಟಿಕೆಗಳನ್ನು ವಿವರಿಸಿದರು. ಡಿಪ್ಲೊಮ, ಎಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ತರಬೇತಿ ಕುರಿತು ಅವರು ವಿವರಿಸಿದರು ಹಾಗೂ ಸಿಮುಲಿಂಕ್‌ನ್ನು ಆರ್ಟಿಫಿಶ್ಯಲ್ ಇಂಟೆಲಿಜೆನ್ಸ್, ಡಿಜಿಟಲ್ ಸಿಗ್ನಲ್ ಪ್ರೊಸೆಸಿಂಗ್, ಇಂಟರ್‌ನೆಟ್ ಆಫ್ ತಿಂಗ್ಸ್ ಮುಂತಾದವುಗಳಿಗಾಗಿ ಇಸ್ರೋ, ವಿಪ್ರೋ, ಇನ್ಫೋಸಿಸ್ ಸಂಸ್ಥೆಗಳು ಉಪಯೋಗಿಸುತ್ತಿರುವ ವಿಷಯವನ್ನು ಶ್ರೀ ಚಂದನ್ ಪ್ರಮಾಣಿಕ್ ಅವರು ವಿವರಿಸಿದರು. ಮುಂದುವರೆದು ಕೋರ್ಸ್ ಮುಗಿದ ನಂತರ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡುವ ವಿಷಯವನ್ನು ಸಹ ವಿವರಿಸಿದರು. ಚರ್ಚೆಯ ನಂತರ ಐಟಿಐ ವಿದ್ಯಾರ್ಥಿಗಳಿಗೆ ಅಲ್ಪಾವಧಿ ತರಬೇತಿ ಕೋರ್ಸ್‌ಗಳನ್ನು ನೀಡುವ ಕುರಿತು ಶಾಲಾ ಮಕ್ಕಳು ಹಾಗೂ ಜಿಟಿಟಿಸಿಯಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ಕುರಿತು ತರಬೇತಿ ನೀಡುವ ಬಗ್ಗೆ ಒಂದು ಪ್ರತ್ಯೇಕ ಪ್ರಸ್ತಾವನೆಯನ್ನು ಮ್ಯಾಟ್ ವರ್ಕ್ಸ್ ಸಂಸ್ಥೆಯು ನೀಡಬೇಕೆಂದು ತೀರ್ಮಾನಿಸಲಾಯಿತು.

**2.3 ಐಟಿಐಗಳಲ್ಲಿ ಉತ್ತೀರ್ಣ ಹೊಂದಿದ ಯುವಕ/ಯುವತಿಯರಿಗೆ ಉದ್ಯೋಗ ನೀಡುವ ವಿಷಯ ಕುರಿತು ಪೀಣ್ಯ ಇಂಡಸ್ಟ್ರೀಸ್ ಅಸೋಸಿಯೇಷನ್ ಹಾಗೂ ಪ್ರಾಂಶುಪಾಲರು ಸರ್ಕಾರಿ ಐಟಿಐ ಪೀಣ್ಯ ಇವರೊಂದಿಗೆ ಸಭೆ**

ಅಧ್ಯಕ್ಷರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ಅವರು ದಿನಾಂಕ: 07–10–2020ರಂದು ನಡೆಸಿದ ಸಭೆಯ ಅನುಸರಣಾ ಸಭೆಯನ್ನು ಶ್ರೀ ಎಸ್.ಜೆ. ಅಮಲನ್ ಸಮಾಲೋಚಕರು, ಕೆ.ಎಸ್.ಡಿ.ಎ ಅವರು ದಿನಾಂಕ: 06–11–2020ರಂದು ಪೀಣ್ಯ ಉದ್ಯಮಿಗಳ ಸಂಘದ ಅಧ್ಯಕ್ಷರು, ಪ್ರಾಂಶುಪಾಲರು ಹಾಗೂ ಉಪಪ್ರಾಂಶುಪಾಲರು ಸರ್ಕಾರಿ ಐಟಿಐ ಪೀಣ್ಯ ಹಾಗೂ ಶ್ರೀಮತಿ ಲಕ್ಷ್ಮೀಶೆಟ್ಟಿ ಪ್ಲೆಸ್‌ಮೆಂಟ್ ಆಫೀಸರ್ ಪೀಣ್ಯ ಅವರೊಂದಿಗೆ ಸಭೆಯನ್ನು ನಡೆಸಿದರು.

ಪೀಣ್ಯ ಉದ್ಯಮಿಗಳ ಸಂಘದಡಿ ಇರುವ ಉದ್ಯಮಗಳಲ್ಲಿ ಹಾಲಿ ಅಭ್ಯಸಿಸುತ್ತಿರುವ ಹಾಗೂ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಉದ್ಯೋಗ ನೀಡುವ ಕುರಿತು ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಪ್ರಾಥಮಿಕ ಕಳಕಳಿಯನ್ನು ಈ ಹಿಂದೆ 07–10–2020ರಂದು ನಡೆದ ಸಭೆಯಲ್ಲಿ ವ್ಯಕ್ತಪಡಿಸಲಾದ ಅಭಿಪ್ರಾಯವನ್ನು ಪುನರುಚ್ಛರಿಸಿದರು. ಪೀಣ್ಯ ಉದ್ಯಮಗಳ ಸಂಘದಡಿ ಬರುವ ಬೃಹತ್ ಉದ್ಯಮಗಳಲ್ಲಿ ಹಾಗೂ ಇತರೆ ಉದ್ಯಮಗಳಲ್ಲಿ ಐಟಿಐ ವಿದ್ಯಾರ್ಥಿಗಳನ್ನು ಅಲ್ಪಾವಧಿ ತರಬೇತಿಯನ್ನು ನೀಡುವುದರಿಂದ ಉದ್ಯಮಗಳಿಗೆ ಸೂಕ್ತ ಅಭ್ಯರ್ಥಿಗಳನ್ನು ದೊರಕದಂತಾಗುವುದಲ್ಲದೇ ತರಬೇತಿ ನೀಡುವುಂತಾಗುವುದು ಎಂದು ಸಭೆಗೆ ತಿಳಿಸುತ್ತಾ ಐಟಿಐ ವಿದ್ಯಾರ್ಥಿಗಳ ಟ್ರೇಡ್ ವೈಸ್ ಮಾಹಿತಿಯನ್ನು ಒದಗಿಸುವಂತೆ ಸಮಾಲೋಚಕರು ತಿಳಿಸಿದರು.

ಅಧ್ಯಕ್ಷರು, ಪೀಣ್ಯ ಉದ್ಯಮಿಗಳ ಸಂಘ ಇವರು ತಮ್ಮ ಅಡಿ ಬರುವ ಉದ್ಯಮಗಳಿಂದ ಮಾಹಿತಿಯನ್ನು ಸಂಗ್ರಹಿಸಲು ಈಗಾಗಲೇ ಕೆಲವರನ್ನು ನಿಯೋಜಿಸಿರುವುದಾಗಿ ತಿಳಿಸುತ್ತಾ ಸದ್ಯ ಉದ್ಯಮಿಗಳಿಗೆ ಸೂಕ್ತ ಸುತ್ತೋಲೆಯನ್ನು ಕಳುಹಿಸಿರುವುದಾಗಿ ತಿಳಿಸಿದರು. ಮಾಹಿತಿ ಸ್ವೀಕೃತಿ ನಂತರ ಅದನ್ನು ಪ್ರಾಧಿಕಾರದೊಂದಿಗೆ ಹಂಚಿಕೊಳ್ಳುವುದಾಗಿ ತಿಳಿಸಿದರು. ಅಲ್ಪಾವಧಿ ತರಬೇತಿ ನೀಡುವ ವಿಷಯ ಕುರಿತು ಅಧ್ಯಕ್ಷರು, ಪೀಣ್ಯ ಉದ್ಯಮಿಗಳ ಸಂಘ ಅವರು ಐಟಿಐ ವಿದ್ಯಾರ್ಥಿಗಳನ್ನು ತರಬೇತಿ ನೀಡಿ ಉದ್ಯಮಗಳಲ್ಲಿ ಉದ್ಯೋಗವಕಾಶ ಕಲ್ಪಿಸಲು ಸಂಘಕ್ಕೆ ಸಾಧ್ಯವೆಂದು ತಿಳಿಸಿದರು. ಈ ಹಿನ್ನಲೆಯಲ್ಲಿ ಯುಎನ್‌ಡಿಪಿ ಅವರೊಂದಿಗೆ ಐಟಿಐ ವಿದ್ಯಾರ್ಥಿಗಳನ್ನು ಕುರಿತು ಇರುವ ಮಾಹಿತಿಯನ್ನು ಪೀಣ್ಯ ಉದ್ಯಮಗಳ ಸಂಘದೊಂದಿಗೆ ಮುಂದಿನ ವಾರ ಹಂಚಿಕೊಳ್ಳಬೇಕೆಂದು ತಿಳಿಸಲಾಯಿತು. ಸುಮಾರು 4,600 ವಿದ್ಯಾರ್ಥಿಗಳ ಮಾಹಿತಿಯನ್ನು 11 ಐಟಿಐ ಸಂಸ್ಥೆಗಳಿಂದ ಸಂಗ್ರಹಿಸಿರುವುದಾಗಿ ತಿಳಿಸಲಾಗಿದೆ.

ಚರ್ಚೆಯ ನಂತರ ಪೀಣ್ಯ ಉದ್ಯಮಗಳ ಸಂಘವು ಐಟಿಐ ವಿದ್ಯಾರ್ಥಿಗಳಿಗೆ ಉದ್ಯೋಗವಕಾಶಗಳನ್ನು ನೀಡುವ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಕುರಿತು ಸ್ವೀಕೃತವಾದ ಮಾಹಿತಿಯನ್ನು ಸದಸ್ಯ ಉದ್ಯಮಗಳೊಂದಿಗೆ ಹಂಚಿಕೊಳ್ಳುವುದಾಗಿ ತಿಳಿಸಲಾಯಿತು. ಅಧ್ಯಕ್ಷರು, ಪೀಣ್ಯ ಉದ್ಯಮಗಳ ಸಂಘ ಅವರು ದಿನಾಂಕ: 18–11–2020ರಂದು ಐಟಿಐ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಪ್ರೇರಣಾ ಪೂರ್ವಕ ಭಾಷಣ ಮಾಡುವಂತೆಯೂ ಹಾಗೂ ಅಂದೇ ವಿದ್ಯಾರ್ಥಿಗಳಿಂದ ಸ್ವೀಕೃತವಾದ ಬಯೋ ಡೇಟಾಗಳನ್ನು ಪೀಣ್ಯ ಸಂಘಕ್ಕೆ ಒಪ್ಪಿಸುವಂತೆಯೂ ತೀರ್ಮಾನಿಸಲಾಯಿತು.





## 2.4 ಟೀಮ್ ಸ್ಪ್ರಿಂಗ್ ಎಂಜಿನಿಯರಿಂಗ್ ಸಲ್ಯೂಷನ್ಸ್ ಎಲ್‌ಎಲ್‌ಪಿ ಹೆಕ್ಸ್‌ಗಾನ್ ಎಮ್‌ಎಸ್‌ಸಿ ಸಾಫ್ಟ್‌ವೇರ್ ಸಂಸ್ಥೆಯೊಂದಿಗೆ ಸಭೆ

ಅಧ್ಯಕ್ಷರು, ಕರ್ನಾಟಕ ಕೌಶ್ಯಲ ಅಭಿವೃದ್ಧಿ ಪ್ರಾಧಿಕಾರ ಅವರ ಸೂಚನೆಯೊಂದಿಗೆ ಶ್ರೀ ಎಸ್.ಜೆ. ಅಮಲನ್ ಸಮಾಲೋಚಕರು, ಕೆ.ಎಸ್.ಡಿ.ಎ. ಅವರು ದಿನಾಂಕ: 06-11-2020ರಂದು ಟೀಮ್ ಸ್ಪ್ರಿಂಗ್ ಎಂಜಿನಿಯರಿಂಗ್ ಸಲ್ಯೂಷನ್ಸ್ ಎಲ್‌ಎಲ್‌ಪಿ ಹೆಕ್ಸ್‌ಗಾನ್ ಎಮ್‌ಎಸ್‌ಸಿ ಸಾಫ್ಟ್‌ವೇರ್ ಸಂಸ್ಥೆಯೊಂದಿಗೆ ಒಂದು ಸಭೆಯನ್ನು ನಡೆಸಿದರು. ಈ ಸಭೆಯಲ್ಲಿ ಹಿರಿಯ ನಿರ್ದೇಶಕರಾದ ಶ್ರೀ ಶ್ಯಾಮ್‌ಸುಂದರ್ ನಾಯಕ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ವಿಕ್ರಮ್ ಸಿನ್ಹ ದೇಸಾಯಿ ಅವರು ಹಾಜರಿದ್ದರು. ಚರ್ಚೆಯ ನಂತರ ಟೀಮ್ ಸ್ಪ್ರಿಂಗ್ ಎಂಜಿನಿಯರಿಂಗ್ ಸಲ್ಯೂಷನ್ಸ್ ಎಲ್‌ಎಲ್‌ಪಿ ಹೆಕ್ಸ್‌ಗಾನ್ ಎಮ್‌ಎಸ್‌ಸಿ ಸಾಫ್ಟ್‌ವೇರ್ ಸಂಸ್ಥೆಯು ಅಡ್ವಾನ್ಸ್ ಮ್ಯಾನುಫ್ಯಾಕ್ಚರಿಂಗ್ ಕುರಿತು ಒಂದು ಅಧಿಕೃತ ಪ್ರಸ್ತಾವನೆಯನ್ನು ಕುರಿತು ತಿಳಿಸಿದರು.

ಚರ್ಚೆಯ ನಂತರ ಟೀಮ್ ಸ್ಪ್ರಿಂಗ್ ಎಂಜಿನಿಯರಿಂಗ್ ಸಲ್ಯೂಷನ್ಸ್ ಎಲ್‌ಎಲ್‌ಪಿ ಹೆಕ್ಸ್‌ಗಾನ್ ಸಂಸ್ಥೆಯು ಅಡ್ವಾನ್ಸ್ ಮ್ಯಾನುಫ್ಯಾಕ್ಚರಿಂಗ್ ಕುರಿತು ಒಂದು ಪ್ರಸ್ತಾವನೆಯನ್ನು ಸಲ್ಲಿಸುವುದಲ್ಲದೆ ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ ಅವರ ಕಛೇರಿಯಲ್ಲಿ ಪರಿಷ್ಕೃತ ಪ್ರಸ್ತಾವನೆ ಕುರಿತು ಒಂದು ಪ್ರಾತ್ಯಕ್ಷತೆ ಏರ್ಪಡಿಸುವುದರಲ್ಲಿ ನಿರ್ಧರಿಸಲಾಯಿತು.

## 2.5 ಐಟಿಐ ವಿದ್ಯಾರ್ಥಿಗಳನ್ನು ಪೀಣ್ಯ ಉದ್ಯಮಗಳ ಸಂಘದಡಿ ಬರುವ ಉದ್ಯಮಗಳಲ್ಲಿ ಉದ್ಯೋಗ ನೀಡುವ ಕುರಿತು ಒಂದು ಪ್ರಯೋಗಿಕ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು ಸಭೆ.

ದಿನಾಂಕ: 12-11-2020ರಂದು ಅಧ್ಯಕ್ಷರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ ಅವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಡಾ॥ ಕೆ.ವಿ. ತ್ರಿಲೋಕ್ ಚಂದ್ರ ಭಾ.ಆ.ಸೇ., ಆಯುಕ್ತರು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಶ್ರೀ ಎಸ್.ಜೆ. ಅಮಲನ್ ಸಮಾಲೋಚಕರು, ಶ್ರೀ ಪ್ರಕಾಶ್ ಸಿ. ಅಧ್ಯಕ್ಷರು, ಕರ್ನಾಟಕ ಉದ್ಯಮಗಳ ಸಂಘ, ಶ್ರೀ ಆದೇಶ್ ಎ ಬುರ್ಜಿ ಪೀಣ್ಯ ಉದ್ಯಮಗಳ ಸಂಘ, ಕೆ.ಎಸ್.ಡಿ.ಎ. ಕಛೇರಿಯ ವ್ಯವಸ್ಥಾಪಕರು, ಸಮಾಲೋಚಕರು ಹಾಗೂ ಇತರೆ ಕೆ.ಎಸ್.ಡಿ.ಎ ಸಿಬ್ಬಂದಿಗಳು ಹಾಜರಿದ್ದರು.





ಅಧ್ಯಕ್ಷರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ ಅವರು ಐಟಿಐ ವಿದ್ಯಾರ್ಥಿಗಳು ಹಾಗೂ ಉತ್ತೀರ್ಣ ಹಾಗೂ ಅನುತ್ತೀರ್ಣ ಐಟಿಐ ವಿದ್ಯಾರ್ಥಿಗಳ ಪಟ್ಟಿಗಳನ್ನು ಪೀಣ್ಯ ಉದ್ಯಮಿಗಳ ಸಂಘವೂ ತನ್ನ ಅಡಿ ಬರುವ ಉದ್ಯಮಗಳಲ್ಲಿ ಅಲ್ಪಾವಧಿ ತರಬೇತಿ ನೀಡಲು ಹಾಗೂ ಅವರಿಗೆ ಕೆಲಸ ನೀಡವ ಪ್ರಯೋಗಿಕ ಯೋಜನೆಯನ್ನು ಕೈಗೆತ್ತಿಕೊಳ್ಳುವಂತೆ ಸೂಚಿಸಿದರು. ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಐಟಿಐನಲ್ಲಿನ ವಿದ್ಯಾರ್ಥಿಗಳು ಹಾಗೂ ಡ್ರಾಪ್‌ಔಟ್ಸ್ ವಿದ್ಯಾರ್ಥಿಗಳು ಇವರಿಗೆ ಅಲ್ಪಾವಧಿ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಅವರನ್ನು ಉದ್ಯಮಗಳಲ್ಲಿ ಕೆಲಸ ನೀಡಬಹುದಾಗಿದೆ ಎಂದು ತಿಳಿಸಿದರು. ಮುಂದುವರೆದು ಆಯುಕ್ತರು, ಈ ಯೋಜನೆಯ ಒಂದು ಅಂಗವಾಗಿ ಅಂತಿಮ ವರ್ಷದಲ್ಲಿ ಓದುತ್ತಿರುವ ವಿದ್ಯಾರ್ಥಿಗಳನ್ನು ಸಹ ಅಪ್ರೆಂಟಿಶಿಪ್ ಯೋಜನೆಯಡಿ ತರಬಹುದಾಗಿದೆ ಎಂದು ತಿಳಿಸಿದರು. ಸಮಾಲೋಚಕರು ತರಬೇತಿ ಯೋಜನೆ ಕುರಿತು ಬೇಕಾಗುವ ಆರ್ಥಿಕ ನೆರವು ನೀಡುವುದಕ್ಕೆ ಪ್ರಸ್ತಾಪಿಸಿದರು. ಅಧ್ಯಕ್ಷರು, ಪೀಣ್ಯ ಉದ್ಯಮಗಳ ಸಂಘ ಅವರು ವಿದ್ಯಾರ್ಥಿಗಳನ್ನು ಸಣ್ಣ ಕೈಗಾರಿಕೆಗಳಲ್ಲಿ ನೇಮಕ ಮಾಡುವುದರಿಂದ ಅವರುಗಳು ಉದ್ಯಮಶೀಲತೆಯ ಮನಸ್ಥಿತಿ ಬೆಳಸಿಕೊಳ್ಳಲು ಅನುಕೂಲವಾಗುವುದಾಗಿ ತಿಳಿಸಿದರು. ಅಧ್ಯಕ್ಷರು, ಅವರ ಸಿಎನ್‌ಸಿ ಕ್ಲಸ್ಟರ್ ಮುಖಾಂತರ ಐಟಿಐ ನಲ್ಲಿ ಉತ್ತೀರ್ಣರಾದ/ಅನುತ್ತೀರ್ಣರಾದ/ಡ್ರಾಪ್‌ಔಟ್ ವಿದ್ಯಾರ್ಥಿಗಳನ್ನು ತರಬೇತಿ ನೀಡಿ ಅವರುಗಳನ್ನು ಸಂಘದಡಿ ಬರುವ ಉದ್ಯಮಗಳಲ್ಲಿ ಉದ್ಯೋಗ ನೀಡಲಾಗುವುದೆಂದು ತಿಳಿಸಿದರು. ಶ್ರೀ ಆದೇಶ್ ಎ ಬುರ್ಜಿ, ಪೀಣ್ಯ ಉದ್ಯಮಗಳ ಸಂಘ ಅವರು ಗಳಿಸಿ–ಕಲಿ ಪದ್ಧತಿಯನ್ನು ಅನುಷ್ಠಾನಗೊಳಿಸಿದಲ್ಲಿ ವಿದ್ಯಾರ್ಥಿಯು ಸೂಕ್ತ ತರಬೇತಿ ಪಡೆಯುವುದಲ್ಲದೇ ಕಲಿಯುತ್ತಾ ಗಳಿಸಿದಂತಾಗುತ್ತದೆ ಎಂದು ತಿಳಿಸಿದರು.

ಚರ್ಚೆಯ ನಂತರ ಸರ್ಕಾರಿ ಐಟಿಐ ಸಂಸ್ಥೆಗಳ ಮೂಲಕ ಪಡೆಯಲಾದ ವಿದ್ಯಾರ್ಥಿಗಳ ಪಟ್ಟಿಯನ್ನು ಪೀಣ್ಯ ಉದ್ಯಮಗಳ ಸಂಘದೊಂದಿಗೆ ಹಂಚಿಕೊಳ್ಳಲು ತೀರ್ಮಾನಿಸಲಾಯಿತು. ಈ ಕುರಿತು ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ ಹಾಗೂ ಪೀಣ್ಯ ಉದ್ಯಮಗಳ ಸಂಘದ ಮಧ್ಯೆ ಐಟಿಐ ವಿದ್ಯಾರ್ಥಿಗಳನ್ನು ಪೀಣ್ಯ ಉದ್ಯಮಗಳ ಸಂಘದಡಿ ಬರುವ ಉದ್ಯಮಗಳಲ್ಲಿ ಉದ್ಯೋಗ ನೀಡುವ ಕುರಿತು ಒಂದು ಒಡಂಬಡಿಕೆಗೆ ಸಹಿ ಹಾಕುವಂತೆಯೂ ಸಹ ಸಭೆಯಲ್ಲಿ ತೀರ್ಮಾನಿಸಲಾಯಿತು. ಮುಂದುವರೆದು ಎಲ್ಲಾ ಐಟಿಐ ಸಂಸ್ಥೆಗಳಿಗೆ ಒಂದು ಪತ್ರವನ್ನು ಬರೆದು ಅಂತ ಸಂಸ್ಥೆಗಳಲ್ಲಿ ಉತ್ತೀರ್ಣಗೊಂಡ ಹಾಗೂ ಅನುತ್ತೀರ್ಣಗೊಂಡ ವಿವರ ಹಾಗೂ ಡ್ರಾಪ್‌ಔಟ್ ವಿದ್ಯಾರ್ಥಿಗಳ ವಿವರಗಳನ್ನು ನೀಡುವಂತೆ ಕೋರಲು ಸಭೆಯಲ್ಲಿ ತೀರ್ಮಾನಿಸಲಾಯಿತು.

## **2.6 ಟ್ಯಾಲಿ ಎಜುಕೇಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ಅಧ್ಯಕ್ಷರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ ಅವರ ಸಭೆ.**

ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು, ದಿನಾಂಕ:13-10-2020ರಂದು ಟ್ಯಾಲಿ ಎಜುಕೇಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ಒಂದು ಸಭೆಯನ್ನು ನಡೆಸಿದರು. ಈ

ಸಭೆಯಲ್ಲಿ ಶ್ರೀ ರಾಕೇಶ್ ಚಂದ್ರಶೇಖರ್ ಸರ್ವೀಸ್ಸ್ ಡೆಲಿವರಿ ಹೆಡ್ ಹಾಗೂ ಶ್ರೀ ಚಿಂತಾಮಣಿಗೌಡ ಪಾಟೀಲ್ ಪ್ರಾದೇಶಿಕ ವ್ಯವಸ್ಥಾಪಕರು ಹಾಜರಿದ್ದರು. ಈ ಸಭೆಯಲ್ಲಿ ಪದವೀಧರ ವಿದ್ಯಾರ್ಥಿಗಳಿಗೆ 3 ತಿಂಗಳ ಅವಧಿಗೆ ತರಬೇತಿ ನೀಡುವ ಬಗ್ಗೆ ಚರ್ಚಿಸಲಾಯಿತು. ಸುದೀರ್ಘ ಚರ್ಚೆಯ ನಂತರ ಟ್ಯಾಲಿ ಎಜುಕೇಷನ್ ಸಂಸ್ಥೆಯವರು ಪದವೀಧರ ವಿದ್ಯಾರ್ಥಿಗಳಿಗೆ 3 ತಿಂಗಳ ತರಬೇತಿ ನೀಡುವ ಕಾರ್ಯಕ್ರಮ ಕುರಿತು ಒಂದು ಪ್ರತ್ಯೇಕ ಪ್ರಸ್ತಾವನೆಯನ್ನು ಹೊಂದಿಸಲು ಸಂಸ್ಥೆಯು ಒಪ್ಪಿಕೊಂಡಿತು.

**2.7.GAME-YuWaah (NITI Ayyoga) ಅವರು "Operationalizing entrepreneurial mindset in our education system" ಕುರಿತು ಆಯೋಜಿಸಲಾದ webinar.**

ದಿನಾಂಕ: 20–11–2020ರಂದು GAME-YuWaah (NITI Ayyoga) ಅವರು "Global Entrepreneurship week ಆಚರಣೆಗಾಗಿ ಒಂದು webinar ಏರ್ಪಡಿಸಿದ್ದರು. ಅಧ್ಯಕ್ಷರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ ಅವರು ""Operationalizing entrepreneurial mindset in our education system" ಕುರಿತು ಸದರಿ webinar ನಲ್ಲಿ ಮುಖ್ಯ ಅತಿಥಿಗಳಾಗಿ ಭಾಷಣ ಮಾಡಿದರು.




ಅಂದೆ ಮಧ್ಯಾಹ್ನ (3–4 ಗಂಟೆಗೆ) BMS Trust ವತಿಯಿಂದ BMS Institute of Technology and Management ಅವರು online ಮುಖಾಂತರ "WORK LIFE BALANCE" ಕುರಿತು ಆಯೋಜಿಸಲಾದ webinar ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

**2.8. YuWaah Working Group ನೊಂದಿಗೆ ಸಭೆ**

ದಿನಾಂಕ:26–11–2020ರಂದು ಅಧ್ಯಕ್ಷರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ ಅವರು YuWaah Working Groupನೊಂದಿಗೆ "Standardization of apprenticeships and

Better positioning of apprenticeship to industry & candidates” ವಿಷಯದ ಕುರಿತು ಸಭೆ ನಡೆಸಿದರು.

 

ಮೇಲ್ಕಂಡ ಚಟುವಟಿಕೆಗಳನ್ನಲ್ಲದೆ ಅಧ್ಯಕ್ಷರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ ಅವರು ದಿನಾಂಕ: 03–11–2020ರಂದು ಯುಎನ್‌ಡಿಪಿ, KASSIA ಮತ್ತು UBUNTU ಸಹಯೋಗದೊಂದಿಗೆ ಹಮ್ಮಿಕೊಳ್ಳಲಾದ ಉದ್ಯೋಗ ಸಹಾಯವಾಹಿನಿಯಲ್ಲಿ ಪಾಲ್ಗೊಂಡು ಮಹಿಳಾ ಉದ್ಯಮಿಗಳ ಕುರಿತು ಸಮೀಕ್ಷೆ ಹಾಗೂ ಅವರುಗಳ ಸಹಾಯವಾಣಿ ಚಟುವಟಿಕೆಗಳನ್ನು ಪರಾಮರ್ಶಿಸಿದರು ಹಾಗೂ

ಅಧ್ಯಕ್ಷರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ ಅವರು ದಿನಾಂಕ: 06–11–2020ರಂದು ಆಕ್ಸೆಸ್ ಸಂಸ್ಥೆಯು ಏರ್ಪಡಿಸಲಾದ ಮಹಿಳಾ ಉದ್ಯಮಿಗಳ ತರಬೇತಿಯನ್ನು ಉದ್ದೇಶಿಸಿ ಮಾತನಾಡಿದ್ದರು. ಈ ತರಬೇತಿಯು ಮಹಿಳಾ ಉದ್ಯಮಿಗಳು ತಮ್ಮ ಉತ್ಪಾದನೆಗಳನ್ನು ಆನ್‌ಲೈನ್ ಮುಖಾಂತರ ಮಾರಾಟ ಮಾಡುವ ಕುರಿತು ಹಮ್ಮಿಕೊಳ್ಳಲಾಗಿತ್ತು.